# ಗುಡಿಯೂ ಸುಂದರ ಬಂಡೆಯೂ ಸುಂದರ



ಗುಡಿಬಂಡೆಯ ಈ ಕೋಟೆ ವಾರಾಂತ್ಯದ ತಿರುಗಾಟಕ್ಕೆ ಪ್ರಶಸ್ತ ತಾಣ. ನಗರದ ಗದ್ದಲದಿಂದ ದೂರವಾಗಿ ಪ್ರಶಾಂತ ವಾತಾವರಣದಲ್ಲಿ ಮನಸ್ಸು ಪ್ರಫುಲ್ಲಗೊಳ್ಳುತ್ತದೆ.

ಚಿತ್ರ– ಲೇಖನ: **ಶಿವಪ್ರಕಾಶ್ ಭೋಗಣ್ಣ**

**ಬೆಂ**ಗಳೂರಿನ ಸಮೀಪದಲ್ಲಿರುವ ಗುಡಿಬಂಡೆಯ ಕೋಟೆ ಬಗ್ಗೆ ಸಾಕಷ್ಟು ಮಂದಿಗೆ ಗೊತ್ತಿಲ್ಲ. ಪ್ರಕೃತಿ ಸೌಂದರ್ಯದೊಂದಿಗೆ ಪ್ರಶಾಂತವಾಗಿರುವ ತಾಣವಿದು. ಒಂದು ದಿನದ ಪ್ರವಾಸಕ್ಕೆ ಹೇಳಿ ಮಾಡಿಸಿದಂತಿರುವ ಈ ಸ್ಥಳ, ಚಾರಣದ ಜೊತೆ ಜೊತೆಯಲ್ಲಿ ಪ್ರಕೃತಿಯ ಒಡನಾಟದ ಸವಿಯನ್ನೂ ನೀಡುತ್ತದೆ.

ಬೆಂಗಳೂರಿನಿಂದ ಸುಮಾರು 95 ಕಿ.ಮೀ. ದೂರದಲ್ಲಿದೆ. ಹೈದರಾಬಾದ್ ರಸ್ತೆಯಲ್ಲಿ ಸುಮಾರು 88 ಕಿ.ಮೀ. ಸಾಗಿ ವರ್ಲಕೊಂಡದ ಬಳಿ ಎಡಕ್ಕೆ ತಿರುಗಿ 7 ಕಿ.ಮೀ. ಸಾಗುತ್ತಿದ್ದಂತೆಯೇ ನಿಮ್ಮ ಕಣ್ಣಿಗೆ ತಂಪನ್ನು ನೀಡಿ, ನಿಮಗೆ ಸ್ವಾಗತವನ್ನು ಬಯಸುತ್ತದೆ ವಿಶಾಲವಾದ ಬೈರಸಾಗರ ಕೆರೆ. ಹೆಸರಿಗೆ ತಕ್ಕಂತೆ ಇದು ಸಾಗರವೇ! ಕಣ್ಣು ಹರಿಸಿದಷ್ಟೂ ವಿಶಾಲ, ಆಕಾಶದ ನೀಲಿ ಬಣ್ಣವನ್ನು ಪ್ರತಿಫಲಿಸುವ ನೀರು. ನಡುನಡುವೆ ನೀರಿನಿಂದ ಎದ್ದು ನಿಂತಂತಿರುವ ಬೃಹತ್ ಬಂಡೆಗಳು. ಆ ಬಂಡೆಗಳ ಮೇಲೆ ತಂಗುವ ವಿವಿಧ ಹಕ್ಕಿಗಳನ್ನು ನೋಡಿದರೆ ಪ್ರಯಾಣದ ಆಯಾಸವೆಲ್ಲಾ ಕ್ಷಣಮಾತ್ರದಲ್ಲಿ ಮಾಯವಾಗಿಬಿಡುತ್ತದೆ.

ಕೆರೆಯ ಹಿನ್ನಲೆಯಲ್ಲಿ, ಆಕಾಶಕ್ಕೆ ತಲೆಯೆತ್ತಿ ನಿಂತಂತೆ ಕಾಣುವ ಬೆಟ್ಟದ ಮೇಲಿರುವುದೇ ಗುಡಿಬಂಡೆಯ ಕೋಟೆ. ಕೆರೆಯಿಂದ ಸ್ವಲ್ಪ ಮುಂದೆ ಊರಿನ ಮುಖ್ಯ ರಸ್ತೆಯ ನಡುವೆ ದೇವಸ್ಥಾನದ ಬಳಿ ಬಲಕ್ಕೆ ಸಾಗುವ ರಸ್ತೆ ಬೆಟ್ಟದ ಬುಡಕ್ಕೆ ಕರೆದೊಯ್ಯುತ್ತದೆ. ಮೇಲೆ ಹತ್ತಲು ಸುಮಾರು 500 ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಮಧ್ಯದಲ್ಲಿ ಸ್ವಲ್ಪ ಬಂಡೆಗಳನ್ನು ಹತ್ತಬೇಕು.

ಬಂಡೆಗಳ ನಡುವೆ ಮಾಡಿರುವ ಮೆಟ್ಟಿಲುಗಳನ್ನು ಮೇಲೆ ಹತ್ತುತ್ತಾ ಹೋದಂತೆ ತಂಪಾದ ಗಾಳಿ ನಿಮಗೆ ಆಯಾಸವಾಗದಂತೆ ನೋಡಿಕೊಳ್ಳುತ್ತದೆ. ಅಲ್ಲಲ್ಲಿ, ದೊಡ್ಡ ಬಂಡೆಗಳಿಂದಾದ ನೈಸರ್ಗಿಕ ಸೇತುವೆಗಳ ಕೆಳಗಿನಿಂದ ಹೋಗಬೇಕು. ಬಂಡೆಗಳ ಕೆಳಗೆ ಕ್ಷಣಕಾಲ ನಿಂತು ಆ ತಂಪನ್ನು ಅನುಭವಿಸಿ